C.R.P.67

Form No.4 (Civil)
Deposition Sheets
(R.P.No.57)

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆಃ 101/2023**

ಪ್ರಾಸಾ. 32 ಚಾಸಾ. 29

| | |
|---|---|
| ಸಾಕ್ಷಿದಾರರ ಹೆಸರು | ಬಸವರಾಜು ವಿಆರ್ |
| ತಂದೆಯ ಹೆಸರು | ಲೇ. ರುದ್ರಪ್ಪ |
| ವಯಸ್ಸು | 36 ವರ್ಷಗಳು |
| ಉದ್ಯೋಗ | ತಾಂತ್ರಿಕ ಸಲಹೆಗಾರ<br>ಮಂಡ್ಯ ಸೈಬರ್ ಕ್ರೈಂ ಪೊಲೀಸ್ ಠಾಣಿ |
| ವಾಸ | ಮಂಡ್ಯ |

**ಸಾಕ್ಷಿಯನ್ನು ದಿನಾಂಕಃ 23.006.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನಾನು ಕಳೆದ 5 ವರ್ಷಗಳಿಂದ ಮಂಡ್ಯ ಮಂಡ್ಯ ಸೈಬರ್ ಕ್ರೈಂ ಠಾಣೆಯಲ್ಲಿ ತಾಂತ್ರಿಕ ಸಲಹೆಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ದಿನಾಂಕಃ05.12.2022 ರಂದು ನಾನು ಠಾಣೆಯಲ್ಲಿ ಕರ್ತವ್ಯ ನಿವಸುತ್ತಿರುವಾಗ ಚಾಸಾ-55 ರವರು ವಿವೋ ಹಾಗೂ ಒಪ್ಪೋ ಕಂಪನಿಯ ಮೊಬೈಲ್ ಗಳನ್ನು ಪರೀಕ್ಷೀಸುವುದಾಕ್ಕಾಗಿ ನನಗೆ ನೀಡಿದರು. ಅವುಗಳು ಸೀಲ್ ಮಾಡಿದ ಚೀಲದಲ್ಲಿ ಇಡಲಾಗಿತ್ತು. ಕೆ ಅಕ್ಷರದಿಂದ ಸೀಲ್ ಮಾಡಲಾಗಿತ್ತು. ಸದರಿ ಮೊಬೈಲ್ ಗಳನ್ನು ಪರಿಶೀಲನೆ ಮಾಡಿದಾಗ ವಿವೋ ಮೊಬೈಲ್ ನಲ್ಲಿ ದಿ.11.12.2022 ರಂದು ಸಂಜೆ. 5.09 ರಿಂದ 43 ಸೆಂಕಡ್ ನಲ್ಲಿ ಇಬ್ಬರು ಗಂಡಸರು ಮಾತನಾಡಿದ ಕಾಲ್ ರೇಕಾರ್ಡಿಂಗ್ ಇತ್ತು. ಅದು 1.07 ನಿಮಿಷದ ಅವಧಿಯಲ್ಲಿ ಇತ್ತು. ಅವರು ಕನ್ನಡ ಭಾಷೆಯಲ್ಲಿ ಮಾತನಾಡಿದ್ದರು. ಒಪ್ಪೋ ಕಂಪನಿಯ ಮೊಬೈಲ್ ನಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ದತ್ತಾಂಶ ಸಿಕ್ಕಿರುವುದಿಲ್ಲ. ಈ ಬಗ್ಗೆ ಟೆಂಪ್ಲೇಟ್ ಮತ್ತು

ಸಾಫ್ಟ್ ವೇರ್ ವರದಿಯನ್ನು ತನಿಖಾಧಿಕಾರಿರವರಿಗೆ ನೀಡಿರುತ್ತೇನೆ. ಈ ಬಗ್ಗೆ ತನಿಖಾಧಿಕಾರಿ ಮಹಜರ್ ಮಾಡಿರುತ್ತಾರೆ. ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಮಹಜರ್ ನಲ್ಲಿನ ಸಹಿಯನ್ನು ನಿ.ಪಿ.25(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ. 35(1) ಮತ್ತು 35(2)ರ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಸಾಫ್ಟ್ ವೇರ್ ವರದಿಯನ್ನು ನಿ.ಪಿ. 70 ಎಂದು , ಮತ್ತು ಸಾಕ್ಷಿಯು ಗುರುತಿಸಿದ ಟೆಂಪ್ಲೇಟ್ ವರದಿಯನ್ನು ನಿ.ಪಿ. 71 ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲು 13ರ ಒಪ್ಪೋ ಫೋನ್ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ವಿವೋ ಕಂಪನಿಯ ಫೋನ್ ನೋಡಿ ಗುರುತಿಸಿದ್ದು ಸದರಿ ಫೋನ್ ಅನ್ನು ಮುದ್ದೆ ಮಾಲು 32 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಜೆ ಎಂ ಜಿ ವಕೀಲರಿಂದ 1 ರಿಂದ 7ನೇ ಆರೋಪಿತರ ಪರವಾಗಿಃ</u>

ತನಿಖಾಧಿಕಾರಿಯು ನನಗೆ ನೋಟಿಸ್ ಕೊಟ್ಟಿರಲಿಲ್ಲ. ನನಗೆ ಮೊಬೈಲ್ ಗಳನ್ನು ಪರಿಶೀಲನೆ ಮಾಡಲು ಬೆಂಗಳೂರು ಸಿ.ಐ.ಡಿ ಘಟಕದಿಂದ ಪ್ರಮಾಣಪತ್ರವನ್ನು ಕೊಟ್ಟಿರುತ್ತಾರೆ. ತನಿಖಾಧಿಕಾರಿಗೆ ನಾನು ಸದರಿ ಪ್ರಮಾಣಪತ್ರವನ್ನು ಕೊಟ್ಟಿರುವುದಿಲ್ಲ. ಪೊಲೀಸರು ನನ್ನ ಬಳಿ ಬಂದಾಗ ಫೋನ್ ಓಪನ್ ಇದ್ದವು ಎಂದರೆ ಸರಿಯಲ್ಲ. ಸದರಿ ಫೋನ್ ಗಳು ಯಾರಿಗೆ ಸಂಬಂಧಪಟ್ಟವು ಎಂದು ಪೋಲಿಸರು ನನಗೆ ಲಿಖಿತವಾಗಿ ದಾಖಲೆಯನ್ನು ಕೊಟ್ಟಿಲ್ಲ ಮತ್ತು ನಾನು ದಾಖಲೆಯನ್ನು ಪರಿಶೀಲನೆ ಮಾಡಿಲ್ಲ. ತನಿಖಾಧಿಕಾರಿ ಸದರಿ ಮೊಬೈಲ್ ಗಳು ಚಾಲನೆಯಲ್ಲಿ ಇರುವ ಬಗ್ಗೆ ದೃಢೀಕರಿಸಿರುವುದಿಲ್ಲ. ತನಿಖಾಧಿಕಾರಿಯವರು ನ್ಯಾಯಾಲಯದ ಪರಿವಾನಿಗೆ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮೊಬೈಲ್ ಗಳನ್ನು ಪೊಲೀಸರು ಈ ಕೇಸ್ ಗಾಗಿ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೊಬೈಲ್ ಗೆ ಪಾಸ್ ವಾರ್ಡ್ ಇತ್ತು. ಅದನ್ನು ತನಿಖಾಧಿಕಾರಿಗಳು ಓಪನ್ ಮಾಡಿದರು. ತನಿಖಾಧಿಕಾರಿ ಪಾಸ್ ವಾರ್ಡ್ ಸೆಟ್ ಮಾಡಿದ್ದರು ಎಂದರೆ ಸರಿಯಲ್ಲ. ಮೊಬೈಲ್ ನಲ್ಲಿ ಯಾವುದೇ ಸಂಭಾಷಣೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವರದಿಗಳನ್ನು ಕೊಟ್ಟಿಲ್ಲ ಎನ್ನುವುದು ಸುಳ್ಳು. ನಾನು ವರದಿಗಳಲ್ಲಿ ಸಹಿ ಮಾಡಿಲ್ಲ ಎಂದರೆ ನಿಜ. ನಮ್ಮ ಇಲಾಖೆಯವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**( 8 ನೇ ಆರೋಪಿ ಪರ ವಕೀಲರು ಮೇಲಿನ ಪಾಟಿ ಸವಾಲು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ).**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

**2 ನೇ ಅಪರ ಜಿಲ್ಲಾ ಮತ್ತು**
**ಸತ್ರ ನ್ಯಾಯಾಧೀಶರು, ಮಂಡ್ಯ.**